ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೧, ಫೆಬ್ರವರಿ, ೨೦೨೬(ಮಾಘ, ೨೨, ಶಕವರ್ಷ, ೧೯೪೭)<br>BENGALURU, WEDNESDAY, 11, FEBRUARY, 2026(MAGHA, 22, SHAKAVARSHA, 1947) | ನಂ. ೧೪೭<br>No. 147 |
|---|---|---|

# GOVERNMENT OF KARNATAKA

No. FD 09 PES 2025

Karnataka Government Secretariat
Vidhana Soudha,
Dr. B.R. Ambedkar Veedhi
Bengaluru,Dated:11.02.2026.

## NOTIFICATION

The draft of the following Rules further to amend the Karnataka Excise (Lease of the Right of Retail Vend of Beer) Rules, 1976, which the Government of Karnataka proposes to make in exercise of the powers conferred by Section 71 of the Karnataka Excise Act, 1965 (Karnataka Act 21 of 1966) is hereby published as required by sub-section (1) of section 71 of the said Act for the information of all persons likely to be affected thereby and notice is hereby given that the said draft will be taken up for consideration after the expiry of seven days from the date of its publication in the official Gazette.

Any objections or suggestions which may be received by the State Government from any person in respect of the said draft before the expiry of the period specified above will be considered by the State Government. The objections or suggestions may be addressed to the Additional Chief Secretary to Government, Finance Department, Vidhana Soudha, Dr. B.R. Ambedkar Veedhi, Bengaluru -560001.

# DRAFT RULES

**1. Title and commencement: -** (1) These Rules may be called the Karnataka Excise (Lease of the Right of Retail Vend of Beer) (Amendment) Rules, 2026.

(2) They shall come into force from the date of their final publication in the official Gazette.

**2. Amendment of Rule 3:-** In the Karnataka Excise (Lease of the Right of Retail Vend of Beer) Rules, 1976, (hereinafter referred to as the said rules), in rule 3, for the words "Deputy Commissioner", the words "Deputy Commissioner of Excise" shall be substituted.

**3. Amendment of Rule 4:-** In the said Rules in rule 4,-

(i) for the words "Deputy Commissioner", the words "Deputy Commissioner of Excise" shall be substituted.

(ii) the following proviso shall be inserted, namely:-

> "Provided that, the Deputy Commissioner of Excise shall grant lease to vend Bulk Beer to a holder of a licence in Form CL-4 or Form CL-6A or Form CL-7 or Form CL-9 or Form CL-9A or Form CL-17 or Form CL-18 issued under the Karnataka Excise (Sale of Indian and Foreign Liquors) Rules, 1968. Such Attached RVB Licences shall be auto generated in electronic mode after payment of the fees specified in rule 5".

**4. Amendment of Rule 4-A:-** In the said rules in rule 4-A for the words "Deputy Commissioner", the words "Deputy Commissioner of Excise" shall be substituted.

**5. Amendment of Rule 7:-** In the said rules, in rule 7 for the words "Deputy Commissioner", the words "Deputy Commissioner of Excise" shall be substituted.

**6. Omission of Rule 12:-** In the said rules, rule 12 shall be omitted.

**7. Amendment of Form II:-** In the said rules in Form II:

i. in Part-A, for the words and brackets, "Deputy Commissioner…………District (in case of grant of licence)/Deputy Commissioner of Excise……..……District (in case of renewal of licence)", in two places where they occur, the words "Deputy Commissioner of Excise………District" shall be substituted.

ii. in Part-B, for the words and brackets, "Deputy Commissioner…………District (in case of grant of licence)/Deputy Commissioner of Excise……..……District (in case of renewal of licence)", occurring at the end, the words "Deputy Commissioner of Excise………District" shall be substituted.

**By Order and in the Name of**
**The Governor of Karnataka**
**Sd/-**
**(BHIMAPPA P AJOOR)**
**Under Secretary to Government**
**Finance Department (Excise)**

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 09 ಪಿಇಎಸ್ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11.02.2026

ಅಧಿಸೂಚನೆ

ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಕಲಂರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ, ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 1976 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳ ಕರಡನ್ನು,ಕಲಂ 71ರ ಉಪಕಲಂ(1)ರಡಿ ಅಗತ್ಯಪಡಿಸಿರುವಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಏಳು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿವಳಿಕೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 01 ಇವರಿಗೆ ಕಳುಹಿಸಬಹುದು.

## <u>ಕರಡು ನಿಯಮಗಳು</u>

**1.** <u>ಶೀರ್ಷಿಕೆ</u> <u>ಮತ್ತು</u> <u>ಪ್ರಾರಂಭ</u> :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. <u>**3** ನೇ ನಿಯಮದ ತಿದ್ದುಪಡಿ</u>:- ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ)ನಿಯಮಗಳು, 1976 ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), 3 ನೇ ನಿಯಮದಲ್ಲಿ "ಜಿಲ್ಲಾಧಿಕಾರಿಗಳು" ಎಂಬ ಪದಗಳ ಬದಲಾಗಿ, "ಅಬಕಾರಿ ಉಪ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**3**. <u>**4** ನೇ ನಿಯಮದ ತಿದ್ದುಪಡಿ</u>:- ಸದರಿ ನಿಯಮಗಳ 4 ನೇ ನಿಯಮದಲ್ಲಿ-

(i) "ಜಿಲ್ಲಾಧಿಕಾರಿಗಳು" ಎಂಬ ಪದಗಳ ಬದಲಾಗಿ, "ಅಬಕಾರಿ ಉಪ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ii) ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:-

"ಪರಂತು, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ಅಡಿಯಲ್ಲಿ ನೀಡಲಾಗುವ ನಮೂನೆ ಸಿಎಲ್-4 ಅಥವಾ ನಮೂನೆ ಸಿಎಲ್-6A ಅಥವಾ ನಮೂನೆ ಸಿಎಲ್-7 ಅಥವಾ ನಮೂನೆ ಸಿಎಲ್-9 ಅಥವಾ ನಮೂನೆ ಸಿಎಲ್-9A ಅಥವಾ ನಮೂನೆ ಸಿಎಲ್-17 ಅಥವಾ ನಮೂನೆ ಸಿಎಲ್-18 ರಲ್ಲಿ ಸನ್ನದನ್ನು ಹೊಂದಿರುವವರಿಗೆ ಅಬಕಾರಿ ಉಪ ಆಯುಕ್ತರು ಬಲ್ಕ್ ಬಿಯರ್ ಮಾರಾಟಕ್ಕಾಗಿ ಗುತ್ತಿಗೆ ನೀಡತಕ್ಕದ್ದು. ಅಂತಹ ಅಟ್ಯಾಚ್ಡ್ ಆರ್‌ವಿಬಿ ಸನ್ನದುಗಳನ್ನು ನಿಗದಿತ ಶುಲ್ಕವನ್ನು ಪಾವತಿಸಿದ ನಂತರ ಎಲೆಕ್ಟ್ರಾನಿಕ್ ವಿಧಾನದಲ್ಲಿ ಸ್ವಯಂಚಾಲಿತವಾಗಿ ಸೃಜಿಸಲಾಗುತ್ತದೆ".

**4**. <u>**4-**ಎ</u> <u>ನೇ ನಿಯಮದ ತಿದ್ದುಪಡಿ</u>:- ಸದರಿ ನಿಯಮಗಳ 4-ಎ ನೇ ನಿಯಮದಲ್ಲಿ, "ಜಿಲ್ಲಾಧಿಕಾರಿಗಳು" ಎಂಬ ಪದಗಳ ಬದಲಾಗಿ, "ಅಬಕಾರಿ ಉಪ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**5**. **7** ನೇ ನಿಯಮದ ತಿದ್ದುಪಡಿ:- ಸದರಿ ನಿಯಮಗಳ 7 ನೇ ನಿಯಮದಲ್ಲಿ, "ಜಿಲ್ಲಾಧಿಕಾರಿಗಳು" ಎಂಬ ಪದಗಳ ಬದಲಾಗಿ, "ಅಬಕಾರಿ ಉಪ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**6**. **12** ನೇ ನಿಯಮವನ್ನು ಬಿಟ್ಟುಬಿಡುವುದು:- ಸದರಿ ನಿಯಮಗಳ 12 ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**7**. ನಮೂನೆ-**II** ರ ತಿದ್ದುಪಡಿ:- ಸದರಿ ನಿಯಮಗಳ ನಮೂನೆ-II ರಲ್ಲಿ,

i. ಭಾಗ-ಎ ರಲ್ಲಿ ಎರಡು ಕಡೆಗಳಲ್ಲಿ ಬರುವ "ಜಿಲ್ಲಾಧಿಕಾರಿಗಳು............ ಜಿಲ್ಲೆ (ಸನ್ನದು ಮಂಜೂರಾತಿ ನೀಡುವ ಸಂದರ್ಭದಲ್ಲಿ/ ಅಬಕಾರಿ ಉಪ ಆಯುಕ್ತರು............ ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ)" ಎಂಬ ಪದಗಳು ಮತ್ತು ಆವರಣಗಳ ಬದಲಾಗಿ, "ಅಬಕಾರಿ ಉಪ ಆಯುಕ್ತರು............ ಜಿಲ್ಲೆ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ii. ಭಾಗ-ಬಿ ರ ಕೊನೆಯಲ್ಲಿ ಬರುವ "ಜಿಲ್ಲಾಧಿಕಾರಿಗಳು............ ಜಿಲ್ಲೆ (ಸನ್ನದು ಮಂಜೂರಾತಿ ನೀಡುವ ಸಂದರ್ಭದಲ್ಲಿ/ ಅಬಕಾರಿ ಉಪ ಆಯುಕ್ತರು............ ಜಿಲ್ಲೆ (ಸನ್ನದು ನವೀಕರಣ ಮಾಡುವ ಸಂದರ್ಭದಲ್ಲಿ/" ಎಂಬ ಪದಗಳು ಮತ್ತು ಆವರಣಗಳ ಬದಲಾಗಿ, "ಅಬಕಾರಿ ಉಪ ಆಯುಕ್ತರು............ ಜಿಲ್ಲೆ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/-
(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH